ಇ. ಎಷ್ಟು ಸಮಯದೊಳಗಾಗಿ ಈ ಎಲ್ಲಾ ಖಾಲಿ ಹುದ್ದೆಗಳನ್ನು ತುಂಬಲಾಗುವುದು?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಅಧೀಕ್ಷಕ ಅಭಿಯಂತರರ ವೃಂದದ ಜೇಷ್ಠತಾ ಪಟ್ಟಿ ವಿಷಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವುದರಿಂದ ಖಾಲಿಯಿರುವ ಮುಖ್ಯ ಅಭಿಯಂತರರ ಹುದ್ದೆಗಳಿಗೆ ಖಾಯಂ ಆಗಿ ಮುಂಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ.

ಆ. ಹೌದು.

ಇ. ಸರ್ವೋಚ್ಚ ನ್ಯಾಯಾಲಯದ ಆದೇಶವಾದ 3 ತಿಂಗಳ ಒಳಗಾಗಿ.

1639 (2104) ಶ್ರೀ ರವಿ .ಸಿ.ಟಿ ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ನವೀಕರಣ ಮತ್ತು ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆಯೇ;

2. ರೂಪಿಸಿದ್ದಲ್ಲಿ ಇದರ ಅಂದಾಜು ಮೊತ್ತ ಎಷ್ಟು ;

3. ಇದನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗಿದೆ. ಯಾವಾಗ ಮುಗಿಸಲಾಗುವುದು, ಹಾಲಿ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ ಸಚಿವರು):

1. ಸರ್ವೆ ಕೆಲಸ ಮತ್ತು ಯೋಜನೆಯ ವಿನ್ಯಾಸಗೊಳಿಸುವ ಕಾರ್ಯ ಮುಗಿದಿದ್ದು ವಿವರವಾದ ಅಂದಾಜನ್ನು ತಯಾರಿಸಲಾಗುತ್ತಿದೆ.

2. ಅಂದಾಜು ಪಟ್ಟಿ ಇನ್ನೂ ತಯಾರಾಗಿಲ್ಲ.

3. ಉದ್ಭವಿಸುವುದಿಲ್ಲ.

1641 (2137) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್.ಎಂ.ಎಲ್.ಎ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನಗರಪಾಲಿಕೆ ವಾರ್ಡ್‌ಗಳ ಪೈಕಿ ಯಾವ ಯಾವ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ.

ಆ. ಯಾವ ಯಾವ ಪ್ರದೇಶಗಳಿಗೆ ಕೊಳವೆ ಬಾವಿ ನೀರು ಸರಬರಾಜು ಮಾಡಲಾಗುತ್ತಿದೆ;

ಇ. ಯಾವ ಯಾವ ಪ್ರದೇಶಗಳಿಗೆ ಕಾವೇರಿ ಮತ್ತು ಕೊಳವೆ ಬಾವಿ ನೀರು ಸರಬರಾಜು ಮಾಡಲಾಗುತ್ತಿದೆ;

ಈ. ಮೇಲಿನಂತೆ ಕುಡಿಯುವ ನೀರನ್ನು ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಸಮಯದಿಂದ ಯಾವ ಯಾವ ಸಮಯದವರೆಗೆ ಸರಬರಾಜು ಮಾಡಲಾಗುತ್ತಿದೆ.

ಉ. ಕಾವೇರಿ ನೀರು ಸರಬರಾಜು ಮಾಡಲು ಆಗದ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಯಾವ ಯಾವ ಕ್ರಮ ವಹಿಸಲಾಗಿದೆ; (ನಗರ ಪಾಲಿಕೆ ವಾರ್ಡ್‌ವಾರು ವಿವರಗಳನ್ನು ಯೋಜನಾ ವೆಚ್ಚ ಸಹಿತವಾಗಿ ತಿಳಿಸುವುದು)?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) :

ಅ. ಆ ಯಿಂದ ಈ ವರೆಗೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಉ. ಮೇಳಾಪುರ 2ನೇ ಹಂತದಿಂದ ಹೆಚ್ಚುವರಿಯಾಗಿ 50 ಎಂ.ಎಲ್.ಡಿ. ನೀರನ್ನು ಪಡೆಯುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಜಲಮಂಡಳಿಗೆ ವಹಿಸಲಾಗಿದೆ. ಇದಕ್ಕೆ ಸುಮಾರು ರೂ. 1200 ಲಕ್ಷಗಳು ಬೇಕಾಗುತ್ತದೆ. ಇದಲ್ಲದೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಡಾವಣೆಗಳು ಹಾಗೂ ಖಾಸಗಿ ಬಡಾವಣೆಗೆ ನೀರು ಸರಬರಾಜು ಮಾಡಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಬಿನಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕೋರಲಾಗಿದೆ. ಇದಕ್ಕಾಗಿ ಸುಮಾರು ರೂ.4,850 ಲಕ್ಷ ಬೇಕಾಗುತ್ತದೆ.